**ದಿ:29.08.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಪಾಟೀ ಸವಾಲು:-**ಪ್ರತಿವಾದಿ **1** ಮತ್ತು **2** ಪರ ಶ್ರೀ**. K.M.B.**ವಕೀಲರಿಂದ:**-**

ನನ್ನ ಖಾಯಂ ವಿಳಾಸ ದಿದ್ದಿಗಿ ಗ್ರಾಮ ಇರುತ್ತದೆ . ನನಗೆ ಓದಲು ಬರೆಯಲು ಬರುವುದಿಲ್ಲ . ನಾನು 1 ನೇ ತರಗತಿಯವರೆಗೆ ವಿದ್ಯಾಭ್ಯಾಸ ನಮ್ಮ ಊರಿನಲ್ಲಿ ಮಾಡಿರುತ್ತೇನೆ. ವಾದ ಪತ್ರದಲ್ಲಿರುವ ಮಾಹಿತಿಯನ್ನು ನಾನೇ ನೀಡಿರುತ್ತೇನೆ . ನಮ್ಮ ತಂದೆ ಚನ್ನಬಸಪ್ಪ ಅವರಿಗೆ 2 ಮಕ್ಕಳು ಇರುತ್ತಾರೆ . ಅವರುಗಳು ನಾನು ಮತ್ತು ನನ್ನ ತಮ್ಮ ಸಿದ್ದಪ್ಪ ಇರುತ್ತೇವೆ . ನನ್ನ ತಂದೆ ಚನ್ನಬಸಪ್ಪ ಈಗ ಸುಮಾರು 10 ವರ್ಷದ ಹಿಂದೆ ಮರಣಹೊಂದಿರುತ್ತಾರೆ . ನನ್ನ ತಾಯಿ ಸಿದ್ದಲಿಂಗಮ್ಮ ಅವರು ಈಗ ಸುಮಾರು 5 ವರ್ಷದ ಹಿಂದೆ ಮರಣಹೊಂದಿರುತ್ತಾರೆ . ನನ್ನ ತಾಯಿ ಸಿದ್ದಲಿಂಗಮ್ಮ ಅವರ ತಂದೆಯ ಹೆಸರು ಚನ್ನಬಸಪ್ಪ ಮತ್ತು ತಾಯಿಯ ಹೆಸರು ಹಾಲಮ್ಮ ಇರುತ್ತದೆ . ನನ್ನ ತಾಯಿಯ ಸ್ವಂತ ಊರು ಹರಪ್ಪನಹಳ್ಳಿ ತಾಲ್ಲೂಕು ಕವಲೇಹಳ್ಳಿ ಗ್ರಾಮ ಇರುತ್ತದೆ . ದಾವಾ ಆಸ್ತಿಯ ಸರ್ವೆ ನಂಬರ್ 91/1 ಇರುತ್ತದೆ . ನಮ್ಮ ತಂದೆ ಜೀವಂತ ಇದ್ದ ಕಾಲಕ್ಕೆ ಅವರೇ ಕುಟುಂಬದ ವ್ಯವಹಾರ ನೋಡಿಕೊಳ್ಳುತ್ತಿದ್ದರು . ಅವರ ಮರಣ ನಂತರ ನಮ್ಮ ತಾಯಿಯವರು ಕುಟುಂಬದ ವ್ಯವಹಾರ ನೋಡಿಕೊಳ್ಳುತ್ತಿದ್ದರು . ನಂತರ ನಾನು ನಮ್ಮ ಕುಟುಂಬದ ವ್ಯವಹಾರ ನೋಡಿಕೊಳ್ಳುತ್ತಿದ್ದೇನೆ. ನಾನು ಮತ್ತು ನನ್ನ ತಮ್ಮ ಸಿದ್ದಪ್ಪ ಅವರು ಒಟ್ಟಿಗೆ ವಾಸ ಮಾಡುವುದಿಲ್ಲ . ನಮ್ಮ ತಾಯಿ ಮರಣಹೊಂದಿದ ನಂತರ ನಾವು ಬೇರೆ ವಾಸ ಇರುತ್ತೇವೆ ಸಾಕ್ಷಿ ಮುಂದುವರೆಸಿ ನಮ್ಮಲ್ಲಿ ಇಬ್ಭಾಗ ಆಗಿರುವುದಿಲ್ಲ . ನಮ್ಮ ತಮ್ಮ ಸಿದ್ದಪ್ಪ ಅವರು ಒಬ್ಬರೇ ವ್ಯವಸಾಯ ಮಾಡುತ್ತಿದ್ದಾರೆ, ನಾನು ವ್ಯಾಪಾರ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನಮ್ಮ ಊರಿನಲ್ಲಿ ಸುಮಾರು 25 ವರ್ಷದಿಂದ ಕಿರಾಣಿ ಅಂಗಡಿ ನಡೆಸುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆಸಿ 2 ವರ್ಷದಿಂದ ಅಂಗಡಿ ನಡೆಸುತ್ತಿದ್ದೇನೆ ಎಂದು ಹೇಳುತ್ತಾರೆ . ನಾನು ಈ ಪ್ರತಿವಾದಿ 1 ಮತ್ತು 2 ರವರ ವಿರುದ್ದ ಈ ಶಾಶ್ವತ ನಿರ್ಭಂದಕಾಜ್ಞೆ ದಾವೆಯನ್ನು ಸಲ್ಲಿಸಿರುತ್ತೇನೆ . ಪ್ರತಿವಾದಿ 2 ಮತ್ತು ಅವರ ಮಗ ಇದೇ ನ್ಯಾಯುಲಯದಲ್ಲಿ O.S.31/2023 ರಂತೆ ಶಾಶ್ವತ ನಿರ್ಭಂದಕಾಜ್ಞೆ ಕೋರಿ ದಾವೆ ಸಲ್ಲಿಸಿರುತ್ತಾರೆ

. ನಾನು ಸದರಿ ದಾವೆಗೆ ಹಾಜರಾಗಿ ತಕರಾರು ಸಲ್ಲಿಸಿರುತ್ತೇನೆ ಎಂದರೆ ಸರಿ. ಸಕ್ಷಿ ಮುಂದುವರೆಸಿ ಸದರಿ ದಾವೆ ವಜಾ ಆಗಿದೆ ಎಂದು ಹೇಳುತ್ತಾರೆ . ನಾನು ಸದರಿ ದಾವೆ ವಜಾ ಆಗಿರುವ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಗಳನ್ನು ಸಲ್ಲಿಸಲು ನನಗೆ ತೊಂದರೆ ಇರುವುದಿಲ್ಲ . ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ 2 ಮತ್ತು ಅವರ ಮಗ ರವರು ಈ ನ್ಯಾಯಾಲಯಲದ ಆದೇಶದ ವಿರುದ್ದ M.A. 12/2023 ಅಫೀಲು ಸಲ್ಲಿಸಿ ಅವರಂತೆ ಆದೇಶ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಅಫೀಲು ಆದೇಶದ ವಿರುದ್ದ ಮಾನ್ಯ ಉಚ್ಚನ್ಯಾಯಾಲಯ, ಬೆಂಗಳೂರಿನಲ್ಲಿ ಪ್ರಶ್ನಿಸಿ W.P.16234/2024 ಇರುತ್ತದೆ ಎಂದರೆ ಸರಿ. ಸದರಿ ರಿಟ್ ಪಿಟೀಷನ್ W.P.16234/2024 ಅನ್ನು ಮಾನ್ಯ ಉಚ್ಚನ್ಯಾಯಾಲಯ ವಜಾ ಅಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು ಆ ಬಗ್ಗೆ ಮಾಹಿತಿಯನ್ನು ತಿಳಿದುಕೊಂಡಿರುವುದಿಲ್ಲ . ನನಗೆ ಈ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರು ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಪ್ರತಿವಾದಿಗಳು ಏನು ತಕರಾರು ಸಲ್ಲಿಸಿರುತ್ತಾರೆ ಎಂದು ಮಾಹಿತಿ ಇರುತ್ತದೆ . ದಾವಾ ಆಸ್ತಿಯ ಸರ್ವೆ ನಂಬರ್ 91/1 ಮೂಲತಃ ಅಂಗಡಿ ಕೊಟ್ರಪ್ಪ ರವರಿಂದ ನಮ್ಮ ತಂದೆ ಚನ್ನಬಸಪ್ಪ ರವರು ಸನ್ 1958 ರಲ್ಲಿ ಖರೀದಿ ಮಾಡಿರುತ್ತಾರೆ . ಸದರಿ ಕ್ರಯ ಪತ್ರದಂತೆ ಸಂಬಂದ ಪಟ್ಟ ಇಲಾಖೆಗಳಲ್ಲಿ ಖಾತೆ ವರ್ಗಾವಣೆ ಆದ ಬಗ್ಗೆ ಪರಿಶೀಲನೆ ಮಾಡಿರುವುದಿಲ್ಲ . ಈ ದಾವೆ ಸಲ್ಲಿಸಿರುವ ಸಂದರ್ಭದಲ್ಲಿ ನಾನು ಕಂದಾಯ ಇಲಾಖೆಯವರು ನೀಡಿರುವ ಬೆಳೆ ದೃಢೀಕರಣ ಪತ್ರ ಮತ್ತು ರೇವಣ ಸಿದ್ದಪ್ಪ ಅವರ ಶಾಲಾ ದೃಢೀಕರಣ ಪತ್ರ ಪರಿಶೀಲನೆ ಮಾಡಿರುತ್ತೆನೆ . ನಮ್ಮ ತಂದೆಯ ಹೆಸರಿಗೆ ಖಾತೆ ವರ್ಗಾವಣೆ ಆಗಿರುವ ಬಗ್ಗೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆಸಿ ಮೂಲ ಪಹಣಿಯು ಅಂಗಡಿ ಕೊಟ್ರಪ್ಪ ಅವರ ಹೆಸರಿಗೆ ಸನ್ 2002 ರವರೆಗೂ ಇರುತ್ತದೆ ಎಂದು ಹೇಳುತ್ತಾರೆ . ನಾನು ಸದರಿ ದಾಖಲೆಯನ್ನು ಸನ್ 2022 ರಲ್ಲಿ ನೋಡಿರುತ್ತೇನೆ . ಸದರಿ ದಾಖಲೆಯನ್ನು ಪ್ರತಿವಾದಿಯವರು ದಾವಾ ಆಸ್ತಿಯಲ್ಲಿ ದಾನ ಪತ್ರವನ್ನು ಹಿಡಿದುಕೊಂಡು ಬಂದಾಗ ನೋಡಿರುತ್ತೇನೆ ಎಂದು ಹೇಳುತ್ತಾರೆ . ಸನ್ 1958 ರಲ್ಲಿ ನಮ್ಮ ತಂದೆಗೆ ಕ್ರಯ ಪತ್ರ ಆದ ನಂತರ ಖಾತೆಯ ವರ್ಗಾವಣೆ ಆದ ಬಗ್ಗೆ ಪರಿಶೀಲನೆ ಮಾಡಿರುತ್ತಿರ ಎಂದರೆ ಸಾಕ್ಷಿ ನನಗೆ ಅವಶ್ಯಕತೆ ಇರುವುದಿಲ್ಲ ಎಂದು ಹೇಳುತ್ತಾರೆ . ಈಗ ನನಗೆ ಅವಶ್ಯಕತೆ ಇರುವ ಕಾರಣ

ನ್ಯಾಯಾಲಯಕ್ಕೆ ಈ ದಾವೆಯನ್ನು ಸಲ್ಲಿಸಿರುತ್ತೇನೆ . ನಾನಾಗಲಿ ನಮ್ಮ ತಂದೆಯಾಗಲಿ ದಾವಾ ಆಸ್ತಿಯ ಖಾತೆ ಬದಲಾವಣೆ ಆಗಲು ಪ್ರಯತ್ನಪಟ್ಟಿರುವುದಿಲ್ಲ . ದಾವಾ ಆಸ್ತಿ ಬಿಟ್ಟು ನಮಗೆ ಸೇರಿದ ಬೇರೆ ಆಸ್ತಿ ಇರುತ್ತದೆ . ಅವುಗಳು ನಮ್ಮ ತಂದೆಗೆ ಪಿತ್ರಾರ್ಜಿತವಾಗಿ ಬಂದಿರುತ್ತದೆ . ನಾನು ಈ ದಾವೆಗೆ ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲನೆ ಮಾಡಿದ ನಂತರ ಸಲ್ಲಿಸಿರುತ್ತೇನೆ . ನಾನು ಮೂಲತಃ ಕೊಟ್ರಪ್ಪ ಅವರಿಗೆ ಸಂಬಂದಿಸಿದ ಹಾಗೆ ಖಾತೆ ಪಹಣಿಯನ್ನು ಹಾಜರುಪಡಿಸಿರುತ್ತೇನೆ . ಸನ್ 2001 ರಲ್ಲಿ ಸನ್ 1958 ರ ಕ್ರಯಪತ್ರದ ಆಧಾರದ ಮೇಲೆ ಪ್ರತಿವಾದಿ 1 ರವರಿಗೆ ಖಾತೆ ವರ್ಗಾವಣೆ ಆಗಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆಸಿ ಸನ್ 1958 ರಲ್ಲಿ ಪ್ರತಿವಾದಿ 1 ರವರು ಜನಿಸಿರುವುದಿಲ್ಲ ಎಂದು ಹೇಳುತ್ತಾರೆ . ಕಂದಾಯ ಇಲಾಖೆಯವರು ಪ್ರತಿವಾದಿ 1 ರವರ ದಾಖಲೆಗಳನು ಪರಿಶೀಲನೆ ಮಾಡಿದ ನಂತರವೇ ಖಾತೆ ವರ್ಗಾವಣೆ ಆಗಿರುತ್ತದೆ ಎಂದರೆ ಸರಿಯಲ್ಲ. ನನಗೆ ಈ ಬಗ್ಗೆ ಗೊತ್ತಿದ್ದರು ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ 1 ರವರು ಖಾತೆ, ಮುಟೇಷನ್ ದಾಖಲೆಗಳನ್ನು ಸೃಷ್ಠಿ ಮಾಡಿರುತ್ತಾರೆ ಎಂದು ಹೇಳುತ್ತಾರೆ .

( ಈ ಹಂತದಲ್ಲಿ ಪ್ರತಿವಾದಿಗಳ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು , ಆಲಿಸಿ ಸಮಯ ನೀಡಲಾಯಿತು )

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ

ಸಹಿ/-

ಸಿವಿಲ್ ನ್ಯಾಯಾಧೀಶರು, ಜಗಳೂರು